# ಮನನ-ಮಾನ್ಯ

## ಜೀವ-ಶಿವ ಸೇವೆಯೇ ಗುರುದಕ್ಷಿಣೆ

ಹದಿನಾರು ಕಳೆಗಳಿಂದ ಕೂಡಿದ ಪೂರ್ಣ ಚಂದ್ರ ಕಾಣುವುದು ಪೌರ್ಣಮಿಯ ರಾತ್ರಿಯಂದು. ಇಂಥದೊಂದು ಪೂರ್ಣಿಮೆಯನ್ನು ಗುರುಪೂರ್ಣಿಮೆ ಎಂದು ಕರೆದರು ಪೂರ್ವಿಕರು. ಪವಿತ್ರವಾದುದು ಏಕೆಂದರೆ ಜ್ಞಾನ ಸೂರ್ಯನ ಪ್ರಖರತೆಯ ಪ್ರತಿಫಲನ ತಂಪಾದ, ಹಿತವಾದ ಬೆಳುದಿಂಗಳಾಗಿ ನಮಗೆ ದೊರೆಯುತ್ತದೆ. ಅದಕ್ಕೆ ಕಾರಣ ಪೂರ್ಣಚಂದ್ರ. ನಿಜದಲ್ಲಿ ಶ್ರೀಗುರು ಇಂತಹ ಪೂರ್ಣಚಂದ್ರ. ಅಜ್ಞಾನದಿಂದಾದ ಅಹಂಕಾರ, ಅಹಂಕಾರದಿಂದಾದ ಅಜ್ಞಾನ- ಇವು ಉಂಟುಮಾಡುವ ಕತ್ತಲೆಯನ್ನು ಆತ ಹೋಗಲಾಡಿಸುತ್ತಾನೆ. ಇದು ಗುರುವಿನ ಕರುಣೆ. ಆತನನ್ನು ಕೃತಜ್ಞತೆಯಿಂದ ನೆನೆಯಲೆಂದೇ ಗುರುಪೂರ್ಣಿಮೆಯ ಆಚರಣೆ.

ಗುರುಸ್ಮರಣೆಯ ಜೊತೆಗೆ ಗುರುಋಣವನ್ನು ತೀರಿಸಿದಾಗಲೆ ಗುರುಪೂರ್ಣಿಮೆಯ ಆಚರಣೆ ಸಾರ್ಥಕವಾಗುತ್ತದೆ. ಋಣ ಎಂದರೆ ಹಣವಲ್ಲ. ಹಿಂದೆ ಗುರುಕುಲದಲ್ಲಿ ಗುರುಗಳು ದಕ್ಷಿಣೆಯಾಗಿ ಅಪೇಕ್ಷಿಸುತ್ತಿದ್ದುದು ಹಣವನ್ನಲ್ಲ, ಶಿಷ್ಯನ ಗುಣವನ್ನು. ಋಣಸಂದಾಯಕ್ಕೆ ವಿಧಿಸುತ್ತಿದ್ದುದು ಸತ್ಯಂ ವದ, ಧರ್ಮಂ ಚರ ಎಂಬ ಬದುಕು. ಜೊತೆಗೆ ಸೇವಾದೀಕ್ಷೆ.

ಜಪ-ತಪ, ಶಾಸ್ತ್ರಾಧ್ಯಯನ, ಪಾಂಡಿತ್ಯ ಸಂಪಾದನೆ ಇವು ಸಾಧಾರಣವೇನಲ್ಲ. ಗುರುಕುಲದಲ್ಲಿ ಇವಕ್ಕೆ ಪ್ರಾಮುಖ್ಯತೆ ಇತ್ತು. ಆದರೆ ಜೀವನವನ್ನು ಸಾರ್ಥಕಪಡಿಸಿಕೊಳ್ಳಲು ಇವಿಷ್ಟೆ ಸಾಲದು. ಇದನ್ನರಿತ ಗುರುಗಳು ಶಿಷ್ಯರಿಗೆ ಸೇವಾದೀಕ್ಷೆಯನ್ನೂ ಕೊಡುತ್ತಿದ್ದರು.

ಈ ಕಾಲದಲ್ಲೂ ಸೇವಾಸಂಸ್ಥೆಗಳು ಇವೆ. ಸೇವೆಯ ಹಣೆಪಟ್ಟಿ ಕಟ್ಟಿಕೊಂಡಿರುವ ವ್ಯಕ್ತಿಗಳೂ ಬಹು ಜನ ಇದ್ದಾರೆ ನಮ್ಮ ಸುತ್ತಮುತ್ತ. ಅಲ್ಲೆಲ್ಲ ಪಾಶ್ಚಾತ್ಯರ ಅಂಧಾನುಕರಣೆ ಕಾಣುತ್ತದೆ. ಇಂತಿಷ್ಟು ಸೇವೆ ಎಂದು ಕಾರ್ಯಕ್ರಮ, ವೇಳಾಪಟ್ಟಿ, ಸೇವೆಯ ಧ್ಯೇಯವಾಕ್ಯ - ಎಲ್ಲ ಪ್ರದರ್ಶಿತವಾಗುತ್ತವೆ. ಒಂದೊಂದೆ ಮಾಡಿದ್ದನ್ನು ಗುರುತು ಮಾಡುತ್ತ ತೃಪ್ತಿಪಟ್ಟುಕೊಳ್ಳುತ್ತಾರೆ. ಪತ್ರಿಕೆಯಲ್ಲಿ ದೊಡ್ಡ ಸುದ್ದಿಯಾಗಬೇಕು, ಸೇವೆ ಮಾಡುತ್ತಿರುವ ಫೋಟೋ ಬರಬೇಕು. ಸೇವೆಗೆ ಇವೇ ಸ್ಫೂರ್ತಿ. ಕಟ್ಟಿಸಿದ ಸಭಾಭವನಕ್ಕೆ, ವೇದಿಕೆಗೆ, ವೇದಿಕೆಯ ಮೇಲೆ ಉಪನ್ಯಾಸಕ್ಕೆಂದು ನಿಲ್ಲಿಸುವ ಪೋಡಿಯಂ, ಜಮಖಾನೆ, ಫ್ಯಾನು- ಎಲ್ಲದರ ಮೇಲೂ ದಾನಮಾಡಿದವರ ಹೆಸರು ದೊಡ್ಡದಾಗಿ ಬರೆಸಿದಾಗಲೆ ಸಂತೋಷ!

ಭಾರತೀಯ ಸಂಸ್ಕೃತಿಯಲ್ಲಿ ಮಹತ್ತರವಾದ ಸ್ಥಾನ ಪಡೆದಿರುವಂತಹ ಸೇವೆ ಇಂಥ ಸೇವೆಯಲ್ಲ. ಆ ಸೇವೆಯ ಸಾರವನ್ನೂ ಅರ್ಥವನ್ನೂ ಗಮನಿಸಿದಾಗ ತಿಳಿಯುತ್ತದೆ: ತ್ಯಾಗವಿಲ್ಲದೆ ಪ್ರೇಮ ಇರದು, ಪ್ರೇಮವಿಲ್ಲದೆ ಸೇವೆ ಇರದು. ಸೇವೆಯಲ್ಲಿ ಸ್ವಾರ್ಥವಾಗಲಿ, ಪ್ರತಿಫಲದ ಅಪೇಕ್ಷೆಯಾಗಲಿ, ಕೃತಜ್ಞತೆ-ಧನ್ಯವಾದಗಳ ನಿರೀಕ್ಷೆ ಸಹ ಇರಬಾರದು. ಶುದ್ಧವಾದ ಅಂತಃಕರಣದಿಂದ ಮಾಡಿದುದಾಗಿರಬೇಕು. ಮಾಡಿದುದು ಉಪಕಾರವಲ್ಲ, ಸೇವೆ ಎಂಬ ವಿನೀತಭಾವ ಇರಲಿ. ಅದು ಬೇರೆ ಯಾರಿಗಾದರೂ ಮಾಡಿದ ಒಳಿತಲ್ಲ, ತಮಗೇ ಮಾಡಿಕೊಂಡ ಒಳಿತು ಎಂದು ತಿಳಿದಿರಬೇಕು. ಅದೀಗ ನಿಜವಾದ ಗುರುದಕ್ಷಿಣೆ.

# ಪ್ರಹಸನ ಪ್ರಸಂಗ

ನಾಲ್ಕನೆಯ ತರಗತಿಯಲ್ಲಿ ಓದುತ್ತಿದ್ದ ಮಕ್ಕಳಿಗೆ ಶಾಲೆಯ ಉಪಾಧ್ಯಾಯರು ಸೌರವ್ಯೂಹದ ಬಗ್ಗೆ ಪಾಠ ಮಾಡಿದ ಮೇಲೆ, ಮನೆಕೆಲಸದ ಅಂಗವಾಗಿ ಯಾವುದಾದರೂ ಒಂದು ಗ್ರಹದ ಬಗ್ಗೆ ಲಘುಟಿಪ್ಪಣಿ ಬರೆದುಕೊಂಡು ಬರಲು ಹೇಳಿದರು. ಒಬ್ಬ ಬಾಲಕ 'ಮಂಗಳ' ಗ್ರಹವನ್ನು ಆಯ್ದುಕೊಂಡರೆ, ಮತ್ತೊಬ್ಬ 'ಶುಕ್ರ' ಗ್ರಹದ ಬಗ್ಗೆ ಬರೆಯಬಯಸಿದ. ಹೀಗೆ ಎಲ್ಲರೂ ಬೇರೆ ಬೇರೆ ಗ್ರಹಗಳ ಬಗ್ಗೆ ಬರೆದರು. ಆದರೆ ರಾಮು ಮಾತ್ರ 'ಭೂಮಿ' ಯ ಬಗ್ಗೆ ಬರೆದುಕೊಂಡು ಬಂದ. "ಯಾಕೆ? ನೀನು ಬೇರೆ ಗ್ರಹಗಳ ಬಗ್ಗೆ ಬರೆಯಬೇಕಿತ್ತು" ಎಂದರು ಉಪಾಧ್ಯಾಯರು "ಸರ್, ನಾನು ನೋಡಿರೋದು ಇದೊಂದೇ ಗ್ರಹವನ್ನು!" ಎಂದ ರಾಮು.

* * *

ಚಳಿಗಾಲದ ಒಂದು ದಿನ, ರಾತ್ರಿ ಎರಡು ಗಂಟೆಗೆ ಫೋನ್ ಹೊಡೆದುಕೊಂಡಿತು. ಮಲಗಿದ್ದ ಡಾಕ್ಟರ್ ನಿದ್ದೆಗಣ್ಣನ್ನು ಉಜ್ಜುತ್ತ ಫೋನ್ ಎತ್ತಿಕೊಂಡ. "ಯಾರು? ಏನಾಗ್ಬೇಕಿತ್ತು?" "ಡಾಕ್ಟರ್! ನಾನು, ನಿಮ್ಮ ಪೇಶಂಟ್, ನನಗೆ ತುಂಬ ಹಲ್ಲುನೋಯ್ತಾಯಿದೆ!" "ಅಲ್ಲಮ್ಮ, ಹಲ್ಲು ನೋವಿಗೆ ನೀವು ಹಲ್ಲಿನ ಡಾಕ್ಟರ್‌ಗೆ ಕರೆ ಮಾಡ್ಬೇಕು, ನನಗಲ್ಲ." "ಗೊತ್ತು ಡಾಕ್ಟ್ರೇ! ಇಷ್ಟೂ ಹೊತ್ತಿನಲ್ಲಿ ಅವರಿಗೆ ಹೇಗೆ ಮಾಡೋದು? ಪರಿಚಯ ಬೇರೆ ಇಲ್ಲ, ಅದಕ್ಕೆ ನಿಮ್ಮನ್ನ ಕೇಳ್ತಿದೀನಿ!" "ಒಳ್ಳೆಯದು, ನೀವು ಸ್ವತಃ ಬಂದಿದ್ದರೆ ಹಲ್ಲನ್ನೇ ಉದುರಿಸುತ್ತಿದ್ದೆ!"

* * *

ರಾತ್ರಿಯೆಲ್ಲ ದೂರದ ಊರಿಗೆ ತನ್ನ ಕಾರಿನಲ್ಲಿ ಪ್ರಯಾಣ ಬೆಳೆಸಿದ್ದ ವ್ಯಕ್ತಿಯೊಬ್ಬನಿಗೆ ಮುಂಜಾನೆಯ ವೇಳೆಗೆ ಮಂಪರು ಹತ್ತಲು ಪ್ರಾರಂಭವಾಯಿತು. ಅಪಘಾತವಾಗಬಹುದೆಂಬ ಭಯದಿಂದ ಒಂದು ನಗರದ ಹೊರವಲಯದಲ್ಲಿ ಗಾಡಿಯನ್ನು ಪಕ್ಕಕ್ಕೆ ನಿಲ್ಲಿಸಿ ನಿದ್ರಿಸಲು ಪ್ರಯತ್ನಿಸಿದ. ಐದು ನಿಮಿಷಗಳಲ್ಲಿ ಅವನ ಕಿಟಕಿಯ ಗಾಜನ್ನು ಯಾರೋ ಕಟಕಟಾಯಿಸಿದರು. ಇವನು ಕಣ್ಣು ಬಿಟ್ಟು ನೋಡಿದಾಗ, "ಸಮಯ ಎಷ್ಟು?" ಎಂದು ವ್ಯಾಯಾಮಕ್ಕಾಗಿ ಓಡುತ್ತಿದ್ದ ಒಬ್ಬ ಜಾಗರ್ ಸಂಜ್ಞೆಗಳ ಮೂಲಕ ಕೇಳಿದ. ಇವನು ಹೇಳಿ ಮತ್ತೆ ಮಲಗಲು ಪ್ರಯತ್ನಿಸಿದ. ಇನ್ನೈದು ನಿಮಿಷಗಳಲ್ಲಿ ಮತ್ತೊಬ್ಬ ವ್ಯಕ್ತಿ ಅದೇ ಕಾರಣಕ್ಕಾಗಿ ಎಬ್ಬಿಸಿದ. ಕಾರಿನಲ್ಲಿ ಪಯಣಿಸುತ್ತಿದ್ದ ವ್ಯಕ್ತಿಗೆ ಸಿಟ್ಟುಬಂದು "ನನ್ನ ಬಳಿ ಗಡಿಯಾರವಿಲ್ಲ. ನನಗೆ ಸಮಯ ಗೊತ್ತಿಲ್ಲ" ಎಂದು ಕಾರಿನ ಗಾಜಿನ ಮೇಲೆ ಗೀಚಿದ. ಇನ್ನು ಹಾಯಾಗಿ ಮಲಗಬಹುದು ಎಂದುಕೊಂಡ. ಕೇವಲ ಐದೇ ನಿಮಿಷಗಳಲ್ಲಿ ಮತ್ತೊಬ್ಬ ವ್ಯಕ್ತಿ ಕಿಟಕಿಯನ್ನು ತಟ್ಟಿ, "ಸರ್, ಈಗ ೫.೩೦ ಆಗಿದೆ. ಪಾಪ, ನಿಮಗೆ ಸಮಯ ಗೊತ್ತಿಲ್ಲ!".